ಗೋವಿಂದರಾಜು ಎಂ. ಕಲ್ಲೂರು ಗುಬ್ಬಿ ತಾಲ್ಲೂಕಿನ ಕಲ್ಲೂರಿನವರು. ಅವರ ಕಥೆಗಳು ಹಲವು ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿವೆ. ಸದ್ಯಕ್ಕೆ ಕೇರಳದ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅವರ ಮತ್ತೊಂದು ಪ್ರಮುಖ ಬರವಣಿಗೆ, ರಾಜ್‌ಕುಮಾರ್ ಕುರಿತು ಪಿಎಚ್.ಡಿ. ಅಧ್ಯಯನ –'ನಾಡುನುಡಿಯ ರೂಪಕ: ಡಾ. ರಾಜಕುಮಾರ್ ಸಿನಿಮಾ'.

ಗೆಲ್ಲೋದು... ಅಣ್ಣಂಗೆ ಜೈ' ಅಂದು ವೇದಿಕೆಯಲ್ಲಿ ಹೊಸಗೆ ಹಾಕೋ ಚೇರಿನ ಮೇಲೆ ಕೂರಿಸಿ 'ನೀ ನುಡಿದರೆ ಹೊನ್ನುಡಿಯದು ಮರು ನುಡಿಯುವರಿಲ್ಲ, ಸಿಂಹಾ... ಸಿಂಹಾದ್ರಿಯ ಸಿಂಹ' ಅಂತ ಹಾಡು ಹಾಕಿಸಿ ಉಬ್ಬಿಸಿ ಕೊಟ್ಟಷ್ಟು ಕಾಸು ಪೀಕ್ಕಂತಿದ್ರು.

ಪಕ್ಷೇತರನೂ ತನ್ನ ಸಮಯಕ್ಕೆ ಸರಿಯಾಗಿ ಬಂದು ಹರಿಜನಗಳ ಆರ್ಕೆಸ್ಟ್ರಾದಿಂದ ಮರ್ವಾದಿಯ ಸ್ವೀಕರಿಸಿ ನೂರರ ನೋಟಿನ ಒಂದು ಕಟ್ಟನ್ನು ಸರ್ವ ಜನಕ್ಕೂ ಕಾಣುವಂತೆ ಕೊಡಲಾಗಿ ಜನವೆಲ್ಲಾ ಕೀಕು-ಕ್ಯಾಕ ಹೊಡೆದು 'ಲೀಡಿಂಗಪ್ಪೋ... ಲೀಡಿಂಗು ನಮ್ಮಣ್ಣನೇ ಲೀಡಿಂಗು' ಅಂತು. ಈ ಪರಾಕಿನಲ್ಲಿ ತೇಲುತ್ತಿದ್ದ ಪಕ್ಷೇತರನು ಇನ್ನೂ ಚೂರು ಬಿಲ್ಡಪ್ ತಕ್ಕಳನಾ ಅಂತೇಳಿ ಅದೇ ದಾರಿಯಲ್ಲಿದ್ದ ಎಂಕಟೇಶ್ವನ ದೇವಾಲಯದ ಕೆಲಸ ನಡೀತಿದ್ದ ಜಾಗಕ್ಕೆ ಹೋದನು. ಗುಡಿ ಆಗತಕಾ ಇರಲಿ ಅಂತ ಮೂರುನಾಮವ ಬಳಿದ ದೇವರು ಅಂತ ಮಾಡ್ಕಂಡಿದ್ದ ಅಲ್ಲಿದ್ದ ಕರಿಕಲ್ಲಿನಿಂದ ಬಲಗಡೆಯ ಪ್ರಸಾದವಾಗುತ್ತಿದ್ದಂತೆ ಪೂಜಾರಯ್ಯ 'ಶ್ರೀಮದ್ ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕ ನಿನ್ನ ಪಾದಕ್ಕೆ ಗೋವಿಂದಾ...'ಎಂದು ಕೂಗಿ ಬಿಟ್ಟಿದ್ದ. ಜನವೂ 'ಗೋವಿಂದಾ... ಗೋವಿಂದಾ...' ಅಂತು. ಇದು ತನ್ನ ಗೆಲುವಿಗೆ ಶುಭ ಸಂಕೇತವೆಂದುಕೊಂಡ ಪಕ್ಷೇತರನು ಐನೂರರ ನೋಟನ್ನು ಮಂಗಳಾರತಿ ತಟ್ಟೆಗೆ ಹಾಕಲು ಅದು ಎಷ್ಟು ವೇಗವಾಗಿ ಬಂತೋ ಅಷ್ಟೇ ವೇಗದಲ್ಲಿ ವೀರಭದ್ರಪ್ಪನೋರ ಶ್ರೀ ಲೋಕಾಂಬ ವೈನ್ ಸ್ಟೋರಿನ ತಿಜೋರಿಗೆ ಬಿದ್ದು ಒದ್ದಾಡಿ ಇತರ ನೋಟುಗಳನ್ನು ತಬ್ಬಿ ಪಾವನವಾಯಿತು.

ಚುನಾವಣೆ ಬಿಸಿ ಏರುತ್ತಲೇ ದೇವಸ್ಥಾನ ಸಜ್ಜೆ ಲೆವೆಲ್ಲಿಗೆ ಬಂತು. ಆ-ಪಕ್ಷ, ಈ-ಪಕ್ಷ, ಅನ್ನದಂಗೆ ಯಾರ್‍ಯಾರೋ ಬಂದು ನೆಲುಕ್ಕೆ ಕಲ್ಲುಹಾಕಿಸೋದೇನು... ಗುಡಿಯ ಬಣ್ಣದ ಅಡ್ವಾನ್ಸ್ ಈಗಲೇ ಕೊಡೋದೇನು... ಪಕ್ಷೇತರನಂಥೂ ಶಂಕ-ಚಕ್ರ-ಗಧಾ ಧಾರಿಯಾದ ಆರಡಿ ವೆಂಕಟೇಶ್ವರನ ಕಲ್ಲಿನ ಪ್ರತಿಮೆಯನ್ನು ಮಾಡಿಸಿ ಮಾದಿಗರ ಸುಪರ್ದಿಗೆ ಕೊಟ್ಟಿದ್ದ. ಅವರು ಅದನ್ನು ಮುಟ್ಟು-ತಟ್ಟು ಆಗದಂಗೆ ಒಬ್ಬೊಂಟಿಯಿದ್ದ ಆದರೂ ನಾಲ್ಕು ಮಕ್ಕಳ ತಂದೆಯೆಂದು ಊರಿಗೆಲ್ಲಾ ಗೊತ್ತಿದ್ದ ಪೂಜಾರಯ್ಯನ ಮನೆಯಲ್ಲಿ 48 ದಿನ ಜಲವಾಸಕ್ಕೆ ಇಕ್ಕಿದ್ದರು. ಇತ್ತಲಾಗೆ ಚುನಾವಣೆಯ ಕಾವು ಹೆಚ್ಚಾಗಿ ದೊಡ್ಡ ಪಕ್ಷದೋರೆಲ್ಲಾ ಸರ್ಕಂಡು ಈ ಬಾರಿ ನಮ್ಮಣ್ಣುನ್ನ ಹ್ಯಾಟ್ರಿಕ್ ಎಂಎಲ್‌ಎ ಮಾಡ್ಲೇಬೇಕು ಅಂತೇಳಿ ಓಟಿಗೆ ಸಾವಿರ ದುಡ್ಡು, ಹೆಂಗಸರಿಗೆ ಒಂದು ಸೀರಿ, ಗಂಡಸರಿಗೆಲ್ಲಾ ಒಂದೊಂದು ಪ್ಯಾಕೆಟ್ ರಾಜಾವಿಸ್ಕಿ, ಕಿಂಗ್ ಸಿಗರೇಟು, ಮನೆಗೊಂದು ಬ್ರೈಲರ್ ಕೋಳಿ ಕೊಟ್ಕಂಡು ಬಂದಿದ್ರು. ಈ ವಿಷಯವ ತಿಳಿದ ಪಕ್ಷೇತರನು ದೊಡ್ಡ ಪಕ್ಷದೋರು ಏನೇನು ಕೊಟ್ಟವ್ರೋ ಅದರ ಡಬ್ಬಲ್ ಹೊಡೀಬೇಕು ಅಂತೇಳಿ ಒಂದು ಕೋಳಿ ಜಾಗಕ್ಕೆ ಎರಡು ಕೋಳಿ, ಒಂದು ಸೀರೆ ಜಾಗಕ್ಕೆ ಎರಡು ಸೀರೆ, ಹೆಣ್ಣು-ಗಂಡು ಭೇದ-ಭಾವ ನೋಡದೇ ಒಂದು ಪ್ಯಾಕೆಟ್ಟಿನ ಜಾಗಕ್ಕೆ ಮೂರು ಪ್ಯಾಕೆಟ್ ರಾಜಾ ವಿಸ್ಕಿಯನ್ನು ಕೊಟ್ಟು ಸಂಪಿಗೆಪುರಕ್ಕೂ ಸ್ವರ್ಗಕ್ಕೂ ಮೂರೇ ಮೂರು ಗೇಣು ಅನ್ನಂಗೆ ಮಾಡಾಕಿಬಿಟ್ಟ.

ಇತ್ತ ಮಾದಿಗರ ಎಂಕುಟೇಸ್ವರನ ಗುಡಿಯು ಸಂಪಿಗೆಪುರದ ರಸ್ತೆಬದಿಯಲ್ಲಿ ತಲೆಯೆತ್ತಿ ನಿಂತು ನೋಡುವವರ ಕಣ್ಣಿಗೆ ಯಾರೋ ಚೂರಿಯಿಂದ ಚುಚ್ಚಿದರು ಎನ್ನುವಷ್ಟು ಪ್ರಕಾಶನಮಾನವಾಗಿ ಕಂಗೊಳಿಸುತ್ತಿತ್ತು. ಚುನಾವಣೆಯಲ್ಲಿ ಎದ್ವಾತವ್ವಾ ಲೀಡಿಂಗಲ್ಲಿ ಗೆದ್ದುಬಂದಿದ್ದ ಪಕ್ಷೇತರನು ಊರೂರು ಮೇಲೆ ಹಾರಹಾಕ್ಯಂಡು ಓಪನ್ ಜೀಪಲ್ಲಿ ಬರ್ತಾ ಇದ್ರೆ ಆಹಾ.. ಇದರ ಅಂದವನ್ನು ನೋಡಲು ವಯಸ್ಕರ ಎರಡು ಕಣ್ಣುಗಳೂ, ವಯಸ್ಸಾದವರ ನಾಲ್ಕು ಕಣ್ಣುಗಳೂ ಸಾಲದಾದವು. ಹೊಸ ಬಿಳೀಅಂಗಿ-ಪೈಜಾಮ-